ಬೇಕೆಂದರೆ ಹೆಣ್ಣು ಮಕ್ಕಳು ಸುಲಭವಾಗಿ ಸಿಕ್ಕುತ್ತಾರೆ ಎಂದು ಚಿಕಿತ್ಸೆ ಮಾಡಿಸಿಕೊಳ್ಳಲು ಅವರನ್ನು ತಳ್ಳಿ ಬಿಡುತ್ತಾರೆ. ಇದು ಪುರುಷ ಪ್ರಧಾನವಾದ ದೇಶ. ಆದ್ದರಿಂದ ಪುರುಷರು ನೀವು ಸಂತಾನ ಹರಣ ಚಿಕಿತ್ಸೆ ಮಾಡಿಸಿಕೊಳ್ಳಿ ಎಂದು ಹೆಂಗಸರನ್ನು ಕಳಿಸುತ್ತಾರೆ. ಇದರ ಮಾಹಿತಿಯನ್ನು ನೋಡಿದರೆ ತಮಗೆ ಚಿನ್ನಾಗಿ ಗೊತ್ತಾಗುತ್ತದೆ. ವ್ಯಾಸೆಕ್ಟಮಿ ಬಹಳ ಸುಲಭ ಮತ್ತು ಖರ್ಚು ಸಹ ಕಡಿಮೆ. ಆದ್ದರಿಂದ ಪುರುಷರೆಲ್ಲಾ ಇದನ್ನು ಮಾಡಿಸಿಕೊಂಡರೆ ಬಹಳ ಸೌಖ್ಯ. ಹೆಣ್ಣು ಮಕ್ಕಳನ್ನು ಇದರ ಕಷ್ಟದಿಂದ ತಪ್ಪಿಸುತ್ತೀರಾ ಎಂದು ಹೇಳುತ್ತೇನೆ. ಹೆಣ್ಣುಮಕ್ಕಳಿಗೆ ಆದರೆ ಟ್ಯೂಬೆಕ್ಟಮಿ ಮಾಡಬೇಕು ಇಲ್ಲದಿದ್ದರೆ ಲೆಪ್ರೋಸ್ಕೋಪಿಕ್ ಆಪರೇಷನ್ ಮಾಡಬೇಕು, ಇದೆಲ್ಲಕ್ಕಿಂತ ಸುಲಭವಾದುದು ವ್ಯಾಸೆಕ್ಟಮಿಯನ್ನು ಮಾಡುವುದು. ದಯಮಾಡಿ ತಾವೆಲ್ಲಾ ಜಾಹೀರಾತು ಮಾಡಿದರೆ ಪುರುಷರಿಗೆ ಸರಿಯಾದ ಆಪರೇಷನ್ ಮಾಡಬಹುದು.

ಶ್ರೀ ವಾಟಾಳ್ ನಾಗರಾಜ್.—ಶಾಸಕರುಗಳು ಇದರಲ್ಲಿ ಎಷ್ಟು ಭಾಗಿ ಆಗಿದ್ದಾರೆ. ಶಾಸಕರುಗಳು ಹಾಗೂ ಮಂತ್ರಿಗಳಲ್ಲಿ ಎಷ್ಟು ಜನ ಈ ಚಿಕಿತ್ಸೆಯಲ್ಲಿ ಭಾಗಿಗಳಾಗಿದ್ದಾರೆ ಎಂಬ ಬಗ್ಗೆ ಅಂಕಿ ಸಂಖ್ಯೆಗಳು ಇದ್ದರೆ ಕೊಡಿ.

ಶ್ರೀ ಸಿ. ಬೈರೇಗೌಡ.—ಮಾನ್ಯ ನಾಗರಾಜ್ ಅವರಿಂದಲೇ ಪ್ರಾರಂಭ ಆಗಲಿ.

ಶ್ರೀ ವಾಟಾಳ್ ನಾಗರಾಜ್.—ನನಗೆ ಎರಡೇ ಮಕ್ಕಳು, ಒಂದು ಗಂಡು. ಒಂದು ಹೆಣ್ಣು. ಇನ್ನು ಬೇಡವೆಂದು ನಾವು ತೀರ್ಮಾನ ಮಾಡಿದ್ದೇವೆ.

ಶ್ರೀ ಎಂ. ನಾರಾಯಣಸ್ವಾಮಿ.—ಮಾನ್ಯ ಸಭಾಧ್ಯಕ್ಷರೇ. ಮಾನ್ಯ ಸಚಿವರು ಹೇಳಿರತಕ್ಕಂಥ ನಿಜವಾದ ಕಾರಣವಲ್ಲವೆಂದು ನನ್ನ ಅಭಿಪ್ರಾಯ. ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಾಗ ಅಲ್ಲಿರತಕ್ಕಂಥ ಡಾಕ್ಟರ್‌ಗಳು, ಅಸಿಸ್ಟೆಂಟ್ ಸರ್ಜನ್‌ಗಳು ಹಾಗೂ ಎಎನ್‌ಎಂಸ್‌ಗಳು ಹೆಣ್ಣು ಮಕ್ಕಳಿಗೆ ಇಲ್ಲದ್ದನ್ನು ಪ್ರಚೋದನೆ ಮಾಡಿ ಆಪರೇಷನ್‌ಗೆ ಕರೆದುಕೊಂಡು ಬರುತ್ತಾರೋ ಆಪರೇಷನ್ ಆದ ಮೇಲೆ ಆಕೆಯ ಗತಿ ಏನು? ಆಕೆ ಹೇಗಿದ್ದಾಳೆ ಎಂಬ ಬಗ್ಗೆ ಏನೂ ನೋಡದೇ ಒಂದರ ಬೇಜವಾಬ್ದಾರಿಯಿಂದ ವರ್ತಿಸತಕ್ಕ ಅಧಿಕಾರ ವರ್ಗ ಇದೆ. ಜೊತೆಗೆ ಅವರು ಏನು ಹೇಳುತ್ತಾರೆ ಎಂದರೆ ಮೂರು ತಿಂಗಳಿಗೆ, ನಾಲ್ಕು ತಿಂಗಳು ನಾವು ಟ್ರೀಟ್‌ಮೆಂಟ್ ಕೊಡುತ್ತೇವೆ ಎಂದು ಆಶ್ವಾಸನೆಯನ್ನು ಕೊಟ್ಟಿರುತ್ತಾರೆ. ಆಪರೇಷನ್ ಆದ ಮೇಲೆ.....

ಅಧ್ಯಕ್ಷರು.—ಕ್ವಿಶ್ಚನ್ ಕೇಳಿ...

ಶ್ರೀ ಎಂ. ನಾರಾಯಣಸ್ವಾಮಿ.—ಆದ್ದರಿಂದ ಇಂತಹ ಅಧಿಕಾರಿಗಳ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ? ಇದಕ್ಕೆ ಇನ್ನೂ ಒಂದು ಕಾರಣ ಇದೆ...

ಅಧ್ಯಕ್ಷರು.—ನೀವು ಕಾರಣ ಹೇಳಬೇಕಾಗಿಲ್ಲ. ಪ್ರಶ್ನೆ ಇದ್ದರೆ ಕೇಳಿ. ಇಲ್ಲದಿದ್ದರೆ ನಾನು ಮುಂದಿನ ಪ್ರಶ್ನೆಗೆ ಹೋಗುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ.—ಇಂಥಹ ನಿರ್ಲಕ್ಷ್ಯ ಅಧಿಕಾರಿಗಳ ಬಗ್ಗೆ ಏನು ಕ್ರಮ ತೆಗೆದು ಕೊಳ್ಳುತ್ತೀರಿ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹೆಣ್ಣು ಮಕ್ಕಳಿಗೆ ಆಪರೇಷನ್ ಆದ ಮೇಲೆ ನಿರ್ಲಕ್ಷ್ಯವಾಗಿ ಟ್ರೀಟ್‌ಮೆಂಟ್ ಮಾಡುತ್ತಾರೆ ಎಂದರೆ ಇಷ್ಟು ಆಪರೇಷನ್‌ಗಳು ಆಗುತ್ತಲೇ ಇರಲಿಲ್ಲ. ಇಲ್ಲಿ ಆಪರೇಷನ್‌ಗಳು ಆ ರೀತಿಯಿಂದ ಗೊತ್ತಾಗುತ್ತದೆ. ನಿಮಗೆ ಆಪರೇಷನ್‌ಗಳ ಮಾಹಿತಿ ಇಲ್ಲವೆಂದು ಕಾಣುತ್ತದೆ. ಮೂರು ತಿಂಗಳು ಅಥವಾ ನಾಲ್ಕು ತಿಂಗಳುಗಳ ಕಾಲ ಯಾವ ಶುಶ್ರೂಷೆಯೂ ಬೇಕಾಗಿಲ್ಲ ಲೆಪ್ರೋಸ್ಕೋಪಿಕ್ ಆಪರೇಷನ್ ಮಾಡಿ ೪-೫ ಗಂಟೆಗಳೊಳಗೆ ಅವರನ್ನು ನಡೆಸಿ ತಿರುಗಿ ಅವರನ್ನು ಮನೆಗೆ ಕಳಿಸುತ್ತಾರೆ. ಇಂತಹ ಸೂಕ್ಷ್ಮವಾದ ಆಪರೇಷನ್‌ಗಳು ಬಂದಿವೆ. ತಾವು ಹೇಳಿದ ಹಾಗೆ ಅವರಿಗೆ ನಿರ್ಲಕ್ಷ್ಯವೂ ಇಲ್ಲ ಮತ್ತು ಅವರಿಗೆ ಯಾವುದೇ ತರಹ ಶಿಕ್ಷೆಯನ್ನು ಕೊಡಬೇಕಾದ ಅವಶ್ಯಕತೆ ಸಹ ಇಲ್ಲ.

ಬೀದರ್ ಜಿಲ್ಲೆಯಲ್ಲಿ ತೆರೆಯಲಾಗಿರುವ ನ್ಯಾಯ ಬೆಲೆ ಅಂಗಡಿಗಳ ಬಗ್ಗೆ

೩೨೧. ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಬೀದರ್ ಜಿಲ್ಲೆಯಲ್ಲಿ ತೆರೆಯಲಾಗಿರುವ ಒಟ್ಟು ಪಡಿತರ ಅಂಗಡಿಗಳ ಸಂಖ್ಯೆ ಎಷ್ಟು ?

ಆ) ಅವು ಯಾವ ಯಾವ ಸ್ಥಳಗಳಲ್ಲಿವೆ ? (ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಇ) ಈ ಅಂಗಡಿಗಳಿಂದ ಎಷ್ಟು ಜನರಿಗೆ ಪಡಿತರ ಚೀಟಿಗಳನ್ನು ನೀಡಲಾಗಿರುತ್ತದೆ ?

ಈ) ಬಸವಕಲ್ಯಾಣ ತಾಲ್ಲೂಕಿನಲ್ಲಿ ಇನ್ನೂ ಎಷ್ಟು ಪಡಿತರ ಅಂಗಡಿಗಳ ಅವಶ್ಯಕತೆ ಇದೆ ಹಾಗೂ ಎಷ್ಟು ಜನರಿಗೆ ಪಡಿತರ ಚೀಟಿಗಳನ್ನು ಹಂಚಬೇಕಾಗಿರುತ್ತದೆ ?

ಉ) ಎಷ್ಟು ಸಮಯದೊಳಗೆ ಸದರಿ ತಾಲ್ಲೂಕಿನ ಆರ್ಹ ಜನರಿಗೆ ಪಡಿತರ ಚೀಟಿಗಳನ್ನು ವಿತರಣೆ ಮಾಡಲಾಗುವುದು ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸಚಿವರಬರಾಜು ಸಚಿವರು). .—

	ಅನೌಪಚಾರಿಕ ಪಡಿತರ ಪ್ರದೇಶ	ನಗರ	ಗ್ರಾಮೀಣ
೧) ಬೀದರ್	೬೬	...	೯೯
೨) ಬಸವಕಲ್ಯಾಣ	...	೨೯	೯೩
೩) ಹುಮ್ನಾಬಾದ್	...	೨೦	೭೯
೪) ಭಾಲ್ಕಿ	...	೧೮	೮೫
೫) ಔರಾದ	...	...	೯೭

	ಒಟ್ಟು	ಚೀಟಿ	
	ಅನೌಪಚಾರಿಕ ಪಡಿತರ ಪ್ರದೇಶ	ನಗರ	ಗ್ರಾಮೀಣ
೧) ಬೀದರ್	೧೫,೧೧೫	—	೩೬,೧೦೫
೨) ಬಸವಕಲ್ಯಾಣ	—	೫,೩೮೦	೩೫,೪೧೨
೩) ಹುಮ್ನಾಬಾದ್	—	೬,೭೫೭	೩೨,೬೮೪
೪) ಭಾಲ್ಕಿ	—	೩,೩೮೫	೩೪,೪೮೬
೫) ಔರಾದ	—	—	೩೫,೬೨೪

ಈ ಬಗ್ಗೆ ಗ್ರಾಮಾಂತರ ಪ್ರದೇಶದಲ್ಲಿ ಇನ್ನೂ ಸಮೀಕ್ಷೆ ಮಾಡಬೇಕಾಗಿದೆ. ಸರ್ಕಾರದ ಆದೇಶ ಸಂಖ್ಯೆ ಎಫ್‌ಟಿಡಿ ೫೭ ಡಿಆರ್‌ಎ ೯೦ ದಿ. ೦೮-೧೧-೯೦ರ ರೀತ್ಯ ಸಮೀಕ್ಷೆ ಮಾಡಲಾಗುವುದು.

ಸರ್ಕಾರದ ಪತ್ರ ಸಂಖ್ಯೆ ಎಫ್‌ಟಿಡಿ/೫೫೧/ಡಿಆರ್‌ಎ/೮೯ ದಿನಾಂಕ ೦೭-೫-೯೦ರಲ್ಲಿನ ನಿರ್ದೇಶನ ಗಳಂತೆ ನಗರ ಪ್ರದೇಶಗಳಲ್ಲಿ ಪಡಿತರ ಚೀಟಿಗಳನ್ನು ವಿತರಿಸಲಾಗುತ್ತಿದೆ ಗ್ರಾಮಾಂತರ ಪ್ರದೇಶದಲ್ಲಿ ಸಮೀಕ್ಷೆಯ ನಂತರ ಪಡಿತರ ಚೀಟಿಗಳನ್ನು ವಿತರಿಸಲಾಗುವುದು.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್. — ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ತಮ್ಮ ಒಂದು ವರದಿಯಲ್ಲಿ ತಿಳಿಸಿದ್ದಾರೆ. ಬೀದರ್ ಜಿಲ್ಲೆಯ ತಾಲ್ಲೂಕುಗಳಲ್ಲಿ ಈ ಪಡಿತರ ಚೀಟಿ ಸರ್ವೆ ಸಮೀಕ್ಷೆ ನಡೆಯುತ್ತಿದೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ನಾನು ಇಷ್ಟು ಮಾತ್ರ ಮಾನ್ಯ ಮಂತ್ರಿಗಳಲ್ಲಿ ಕೇಳಲು ಬಯಸುತ್ತೇನೆ. ಈ ಸರ್ವೆ ಸಮೀಕ್ಷೆಯನ್ನು ಎಂದು ಮುಗಿಸುತ್ತೀರಿ ? ಈ ಸರ್ವೆ ಸಮೀಕ್ಷೆ ಮುಗಿಸಿದ ಮೇಲೆ ಎಷ್ಟೆಷ್ಟು ಜನರಿಗೆ ಪಡಿತರ ಚೀಟಿ ಸಿಗಲಿಲ್ಲ ಅಂತಹ ಜನರಿಗೆ ಯಾವಾಗ ನೀಡುತ್ತೀರಿ ಎಂದು ನಿರ್ದಿಷ್ಟವಾದ ಒಂದು ವಿಚಾರವನ್ನು ಹೇಳುವುದಕ್ಕೆ ತಾವು ಪ್ರಯತ್ನ ಮಾಡಬೇಕು ಎಂದನೆಯದಾಗಿ ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಸೀಮೆ ಎಣ್ಣೆ ಅಭಾವ ಉಂಟಾಗಿ ಜನರಿಗೆ ಬಹಳ ತೊಂದರೆ ಆಗುತ್ತಿದೆ. ಆಹಾರ ಸಾಮಗ್ರಿಗಳನ್ನು ಕೊಡುತ್ತಿರುವುದು ತಿಂಗಳು-ತಿಂಗಳೂ ಸಮರ್ಪಕವಾಗಿ ಬರುತ್ತಿಲ್ಲ. ಇದರ ಬಗ್ಗೆ ತಾವು ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ? ಈ ಎರಡು ಪ್ರಶ್ನೆಗಳಿಗೆ ತಾವು ಉತ್ತರ ಕೊಡಬೇಕು.

ಶ್ರೀ ಟಿ.ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಸಮೀಕ್ಷೆ ಮಾಡುವ ಕಾರ್ಯಕ್ರಮ ತಡವಾಗಿದೆ. ತಡವಾಗಿರುವುದನ್ನು ನಾನು ಮೆಚ್ಚಲಿಕ್ಕೆ ಹೋಗಿಲ್ಲ. ಆದ್ಯತೆಯ ಮೇರೆಗೆ ಆ ಸಮೀಕ್ಷೆಯನ್ನು ಮಾಡಿ ಅವರಿಗೆ ಕಾರ್ಡ್‌ಗಳನ್ನು ಕೊಟ್ಟು ಅವರಿಗೆ ಪಡಿತರ ಮತ್ತು ಇತರೇ ಅವಶ್ಯಕತೆವಾದಂತಹ ವಸ್ತುಗಳನ್ನು ಕೊಡಿಸಲಿಕ್ಕೆ ಎಲ್ಲಾ ರೀತಿಯ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುತ್ತದೆ ಎಂದು ಭರವಸೆ ತಮಗೆ ಕೊಡುತ್ತೇನೆ.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್.—ನಿರ್ದಿಷ್ಟವಾಗಿ ಹೇಳಿ ಸಾಕಷ್ಟು ವರ್ಷದಿಂದ ಸಮೀಕ್ಷೆ ಬಗ್ಗೆ ಹೇಳುತ್ತಿದ್ದೀರಿ ಸಾಕಷ್ಟು ಜನ ಅರ್ಜಿ ಕೊಟ್ಟು ಮೇಲಿಂದ ಮೇಲೆ ನಮಗೆ ಕೇಳುತ್ತಿದ್ದಾರೆ ಎರಡು ಅಥವಾ ಮೂರು ತಿಂಗಳಲ್ಲಿ ಮುಗಿಸುತ್ತೇವೆ ಎಂದು ನಿರ್ದಿಷ್ಟವಾಗಿ ಆದರೂ ಭರವಸೆ ಕೊಡಿ. ನಮ್ಮ ಭಾಗದಲ್ಲಿ ಸೀಮೆ ಎಣ್ಣೆ ಸಿಗುವ ಹಾಗೆ ಇಲ್ಲ. ಆಕ್ಕಿ ಗೋಧಿ ಸಿಗುವ ಹಾಗೆ ಇಲ್ಲ. ಪದೇ ಪದೇ ನಾವು ಹೋದಂತಹ ಸಂದರ್ಭದಲ್ಲಿ ಜನರ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ ನೋಡುತ್ತಿದ್ದೇವೆ ಆದ್ದರಿಂದ ಈ ಸಮೀಕ್ಷೆ ಕೆಲಸ ಯಾವಾಗ ಮುಗಿಸುತ್ತೀರೆಂದು ಹೇಳಬೇಕು.

೧೨-೦೦ ಪಿ.ಎಂ.

ಶ್ರೀ ಟಿ.ಎನ್. ನರಸಿಂಹಮೂರ್ತಿ.—ಇಷ್ಟೇ ದಿವಸದಲ್ಲಿ ಮುಗಿಸುತ್ತೇವೆಂದು ಹೇಳುವುದು ಕಷ್ಟವಾದರೂ ಕೂಡ ಮಾನ್ಯ ಸದಸ್ಯರ ತೀವ್ರವಾದ ಕಳಕಳಿಯನ್ನು ನಾನು ಅರ್ಥಮಾಡಿಕೊಂಡಿದ್ದೀನಿ ಮಂತ್ರಿ ಅವರ ತೀವ್ರತೆಯನ್ನು ಕೂಡ ಗಮನದಲ್ಲಿಟ್ಟುಕೊಂಡು ಆದಷ್ಟು ಬೇಗ ಸಮೀಕ್ಷೆ ಮುಗಿಸಿ. ಈ ಕಾರ್ಯವನ್ನು ಮಾಡುತ್ತೇವೆ.

ಶ್ರೀ ಹೆಚ್. ಏಕಾಂತಯ್ಯ.—ಮಾನ್ಯ ಮುಖ್ಯಮಂತ್ರಿಯವರು ಪಟ್ಟಣ ಪ್ರದೇಶದಲ್ಲಿ ೭-೫-೯೦ರ ಒಂದು ಸುತ್ತೋಲೆ ಪ್ರಕಾರ ಸಮೀಕ್ಷೆ ಮಾಡುತ್ತೇವೆ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ೮-೧೧-೯೦ರ ಒಂದು ಸುತ್ತೋಲೆ ಪ್ರಕಾರ ಸಮೀಕ್ಷೆ ಪ್ರಾರಂಭ ಮಾಡುತ್ತೇವೆ ಎಂದು ಹೇಳಿದ್ದಾರೆ. ಈ ಸಮೀಕ್ಷೆಗೆ ಕಾಲಮಿತಿ ಹಾಕಿಕೊಂಡಿದ್ದೀರಾ ? ಆದರೆಲ್ಲೂ ಸಹ ಗ್ರಾಮಾಂತರ ಪ್ರದೇಶಗಳಲ್ಲಿ ೮-೧೧-೯೦ರ ಸುತ್ತೋಲೆ ಏನು ಇದೆ ಆ ಸುತ್ತೋಲೆ ಪ್ರಕಾರ ಎಷ್ಟು ದಿವಸದಲ್ಲಿ ಸಮೀಕ್ಷೆ ಮುಗಿಸಿ ಅರ್ಹರಾದವರಿಗೆ ಈ ಪಡಿತರ ಚೀಟಿಯನ್ನು ಕೊಡುವ ಉದ್ದೇಶವನ್ನು ತಾವು ಹೊಂದಿದ್ದೀರಿ ?

ಶ್ರೀ ಟಿ.ಎನ್ ನರಸಿಂಹಮೂರ್ತಿ —ನಿರ್ದಿಷ್ಟವಾಗಿ ಇಷ್ಟೆ ದಿವಸದಲ್ಲಿ, ಇಷ್ಟೇ ತಿಂಗಳಲ್ಲಿ ಮಾಡುತ್ತೇವೆಂದು ಹೇಳುವುದಕ್ಕೆ ಬಹಳ ಕಷ್ಟವಾಗುತ್ತದೆ.ಸಮೀಕ್ಷೆಯ ಕಾರ್ಯ ಮುಗಿಸಬೇಕೆನ್ನುವುದು ಇದೆ. ಮಾನ್ಯ ಸದಸ್ಯರು ಕೂಡ ಮಂತ್ರಿಗಳಾಗಿದ್ದಂತವರು. ನಾನು ನಿಮಗೆ ಭರವಸೆ ಕೊಟ್ಟುಮೇಲೆ ನೀವು ಹೇಳುವ ಸಲಹೆಗಳನ್ನು ಬಹಳ ಜವಾಬ್ದಾರಿಯಿಂದ ಗಮನಿಸಿಕೊಂಡಿದ್ದೇನೆ ತೀವ್ರತೆಯಿಂದ ಈ ಸಮೀಕ್ಷೆ ಕಾರ್ಯವನ್ನು ಮಾಡಿಸಿಕೊಡುತ್ತೇನಂಬ ಭರವಸೆಯನ್ನು ಮತ್ತೆ ನೀಡುತ್ತಿದ್ದೇನೆ.

ಹತ್ತು ಸಾವಿರ ರೂಪಾಯಿಗಳ ವರಮಾನವಿರುವವರಿಗೆ ಮಾತ್ರ ಪಡಿತರ ಚೀಟಿಗಳನ್ನು ನೀಡುವ ಬಗ್ಗೆ

೩೦೯ ಶ್ರೀ ರಾಮಲಿಂಗರೆಡ್ಡಿ (ಜಯನಗರ). ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಹತ್ತು ಸಾವಿರ ರೂಪಾಯಿಗಳ ವರಮಾನ ಇರುವವರಿಗೆ ಮಾತ್ರ ಇನ್ನು ಮುಂದೆ ಪಡಿತರ ಚೀಟಿಗಳನ್ನು ನೀಡಲಾಗುವುದೆಂದು ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಹಿಂದೆ ಪತ್ರಿಕಾ ಹೇಳಿಕೆ ನೀಡಿದ್ದು ನಿಜವೇ ?

ಆ) ಹಾಗಿದ್ದಲ್ಲಿ, ಈ ಹೇಳಿಕೆ ನೀಡಲು ಕಾರಣಗಳೇನು ಹಾಗೂ ಈ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಅ) ಇಲ್ಲಾ

ಆ) ಉದ್ಭವಿಸುವುದಿಲ್ಲ.